**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**33/2018**

ಸಿ.ಡಬ್ಲ್ಯೂ –12 ಪಿ.ಡಬ್ಲ್ಯೂ -8

| | | |
|---|---|---|
| ಹೆಸರು | ಃ | ನಾಗೇಂದ್ರಪ್ಪ |
| ತಂದೆಃಗಂಡ | ಃ | ಚಂದಪ್ಪ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕಡಗಂಚಿ |

ದಿನಾಂಕಃ05.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ಮಗ, ಚಾಸಾ-12 ಮತ್ತು 13 ನನ್ನ ಸೊಸೆಯಂದಿರು, ಮೃತ ಶ್ರೀಶೈಲ ಹಾಗೂ ಶಿವಾನಂದ ನನ್ನ ಮಕ್ಕಳು, ಚಾಸಾ-2 ರಿಂದ 11, 15 ರವರ ಪರಿಚಯ ಇರುತ್ತದೆ. ಬೆಳಗ್ಗೆ 6 ಗಂಟೆಗೆ ನನ್ನ ಮಕ್ಕಳು ಆಳಂದ ರಸ್ತೆಯಲ್ಲಿ ನಮ್ಮ ಹೊಲಕ್ಕೆ ಹೊರಟಿದ್ದರು. ಆಗ ನಾನು ಮನೆಯಲ್ಲಿ ಇದ್ದೇನು.ಇನ್ನು ಹೊಲಕ್ಕೆ ಮುಟ್ಟುವ ಮುಂಚೆಯೇ ಅಪಘಾತವಾಗಿದೆ ಎಂದು ನಮಗೆ ತಿಳಿಸಿದರು. ನಾವು ಸಸ್ಥಳಕ್ಕೆ ಹೋಗುವವರೆಗೂ ಒಬ್ಬನು ಮೃತಪಟ್ಟಿದ್ದನು ಮತ್ತೊಬ್ಬನು ಗಾಯಗೊಂಡ ಕಾರಣ ಆಸ್ಪತ್ರೆಗೆ ಕರೆದುಕೊಂಡು ಹೋದೇವು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.03.05.2017 ರಂದು 6.30 ಗಂಟೆಗೆ ನನ್ನಮಕ್ಕಳು ಹೊಲಕ್ಕೆ ಹೊರಟಿದ್ದರು. ನನ್ನ ಮಕ್ಕಳು ವಾಹನ ಸಂಖ್ಯೆ ಕೆಎ-32/ಇಬಿ-3268 ರಲ್‌ಲ್ ಹೊರಟ್ಟಿದ್ದರು ಎಂದರೆ ಸರಿ. ಶ್ರೀಶೈಲ ಮೋಟರ ವಾಹನ ಚಲಾಯಿಸುತ್ತಿದ್ದನು ಶಿವಾನಂದ ಹಿಂದೆ ಕುಳಿತಿದ್ದನು ಎಂದರೆ ಸರಿ. ನಮ್ಮೂರಿನವರಾದ ನಾಗಣ್ಣರವರು ಚಾಸಾ-1 ರವರಿಗೆ ಕರೆ ಮಾಡಿ ಅಪಘಾತವಾದ ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ನನ್ನ ಮಕ್ಕಳು ಎನಡಿಪಿ ಪೆಟ್ರೋಲ ಬಂಕ ಹತ್ತಿರ ಆಳಂದ ಕಡೆಯಿಂದ ಬರುತ್ತಿದ್ದ ಕಾರ ಸಂಖ್ಯೆ ಕೆಎ-32/ಸಿ-6448 ವಾಹನವನ್ನು ಚಲಾಯಿಸಿಕೊಂಡು ಬಂದು ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಆ ಸಮಯದಲ್ಲಿ ಶಿವಾನಂದರವರಿಗೆ ಕಣ್ಣಿನ ಕೆಳಗೆ, ಬಲಗಡೆಗೆ, ಮೊಳಕ್ಕಿಗೆ ತಲೆಗೆ ಹಾಗಾ ಎಲ್ಲ ಕಡೆ ಗಾಯಗಳಾಗಿದ್ದವು ಎಂದರೆ ಸರಿ, ಶ್ರೀಶೈಲ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ ಎಂದರೆ ಸರಿ. ವಾಹನ ಚಲಾಯಿಸುತ್ತಿದ್ದವನ ಹೆಸರು ರಾಘವೇಂದ್ರ ಅವನು ಎಂದು ನ್ಯಾಯಾಲಯದಲ್ಲಿ ಇದ್ದಾನೆ ಎಂದರೆ ಸರಿ. ದಿ.13.05.2017 ರಂದು ಶಿವಾನಂದರವರು ಅಸ್ಪತ್ರೆಯಲ್ಲಿ ಮೃತಪಟಿಟರುತ್ತಾರೆ ಎಂದು ದಿ.14.05.2017 ರಂದು ನಾನು ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಎಸ.ಎಸ್.ಸಿ ವಕೀಲರಿಂದ</u>**

ನಾಗಣ್ಣ ಪಾಳೆರವರ ಹೊಲ ನಮ್ಮ ಹೊಲದ ಕಡೆಗೆ ಇರುವುದಿಲ್ಲ ಎಂದರೆ ಸರಿ. ಆಳಂದ ರಸ್ತೆ ಕಡೆಗೆ ಅವರ ಹೊಲ ಇರುವುದಿಲ್ಲ ಎಂದರೆ ಸಾಕ್ಷಿ ಅವರ ಹೊಲವನ್ನು ಮಾರಿರುತ್ತಾರೆ ಎಂದು ಹೇಳಿರುತ್ತಾರೆ. ನಾಗಣ್ಣ ಪಾಳೆಯರವರು ನಮ್ಮ ಬೀಗರು ಎಂದರೆ ಸರಿ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಕಣ್ಣಾರೆ ನೊಡಿರುತ್ತೇನೆ ಎಂದು ಪೋಲಿಸರ ಮುಂದೆ ಹೇಳಿರುತ್ತೇನೆ ಎಂದರೆ ಸಾಕ್ಷಿ ನನ್ನ ಮಗ ಹೇಳಿರುತ್ತಾನೆ ಎಂದು ಹೇಳುತ್ತಾರೆ. ಪೋಲಿಸರು ನನ್ನ ಹೇಳಿಕೆ ತೆಗೆದುಕೊಂಡಿರುವುದಿಲ್ಲ. ಪೋಲಿಸರು ನಮ್ಮನ್ನು ಎಲ್ಲಿಯೂ ಕರೆಯಿಸಿರುವುದಿಲ್ಲ ಎಂದರೆ ಸಾಕ್ಷಿ ಮರುದಿನ ಅಪಘಾತವಾದ ಸ್ಥಳಕ್ಕೆ ಕರೆಯಿಸಿರುತ್ತಾರೆ ಎಂದು ಹೇಳುತ್ತಾರೆ. ಇದನ್ನು ಹೊರತು ಮತ್ತೇಲ್ಲೂ ಕರೆದಿಲ್ಲ ಎಂದರೆ ಸರಿ. ನಾನು ಆರೋಪಿಯನ್ನು ಮೊದಲಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅಪಘಾತವಾದ ಸ್ಥಳದಲ್ಲಿ ನೋಡಿರುತ್ತೇನೆ ಎಂದು ಹೇಳಿರುತ್ತಾರೆ. ಪೋಲಿಸರು ನಾನು ಆರೋಪಿಯನ್ನು ಅದೇ ದಿನ ನೋಡಿರುತ್ತೇನೆ ಎಂದು ವಿಚಾರಿಸಿರುವುದಿಲ್ಲ. ಚಾಸಾ-15 ರವರು ವಕೀಲರು ಹಾಗೂ ನಮ್ಮ ಬೀಗರು ಎಂದರೆ ಸರಿ. ಪೋಲಿಸ ಠಾಣೆಗೆ ಒಡಾಡುವುದು ಹಾಗೂ ಪ್ರಕರಣವನ್ನು ದಾಖಲಿಸುವುದು ಚಾಸಾ-15 ರವರೇ ಮಾಡಿರುತ್ತಾರೆ ಎಂದರೆ ಸರಿ. ಅಪಘಾತ ಆರೋಪಿಯ ತಪ್ಪಿನಿಂದ ಅಲ್ಲದೇ ನನ್ನ ಮಕ್ಕಳ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಅಪಘಾತವಾದ ಸ್ಥಳಕ್ಕೆ ಹೋದಾಗ ಕಾರ ಪಲ್ಟಿಯಾಗಿತ್ತು ಎಂದರೆ ಸರಿ. ಆಳಂದ ಕಲಬುರಗಿ ರಸ್ತೆ ಉತ್ತರ ದಕ್ಷಿಣ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. ಪಲ್ಟಿಯಾದ ಕಾರು ಎಡಗಡೆ ಬಿದ್ದಿತ್ತು ಎಂದರೆ ಸರಿ. ನನ್ನ ಮಕ್ಕಳು ಹೋಗುತ್ತಿದ್ದ ವಾಹನದ ಮುಂದೆ ಒಂದು ಲಾರಿ ಹೊರಟಿತ್ತು ಅದನ್ನು ಒವರಟೇಕ ಮಾಡಲು ಹೋಗಿ ನನ್ನ ಮಕ್ಕಳೇ ಬಂದು ಆರೋಪಿಯ ವಾಹನಕ್ಕೆ ಬಂದು ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗ ಶ್ರೀಶೈಲನಿಗೆ ಲೈಸೆನ್ಸ ಇತ್ತು. ನಾನಗಲೀ ಚಾಸಾ-1 ರವರಾಗಲೀ ಲೈಸೆನ್ಸನ್ನು ಪೋಲಿಸರಿಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ನನ್ನ ಮಗ ಕೊಟ್ಟಿರಬಹುದು ಎಂದು ಹೇಳುತ್ತಾರೆ. ನಾಗೇಂದ್ರಪ್ಪ ಪಾಳೆಯರಮರ ಅಪಘಾತವಾದ ಬಗ್ಗೆ ವಿಷಯ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಳಂದ ಕಡೆಯಿಂದ ಒಂದು ಕಾರ ಸಂಖ್ಯೆ ಕೆಎ-32/ಸಿ-6448 ಅತಿ ವೇಗ ಮತ್ತು ನಿಶ್ಕಾಳಜಿತನದಿಂದ ನಮ್ಮ ಮಕ್ಕಳಿಗೆ ಅಪಘಾತಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಆರೋಪಿಯ ಪೂರ್ಣ ಹೆಸರು ಕೇಳಿದರೆ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಆರೋಪಿಯ ವಿರುದ್ಧ ಪರಿಹಾರಧನ ಪಡೆಯುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರ ಸರಿಯಲ್ಲ.

**ಮರುವಿಚಾರಣೆಃ- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ